**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 54/2022**

**ಸಾಕ್ಷಿಗೆ ದಿನಾಂಕ 18.2.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಾಧಕೃಷ್ಣ | ಪಿ.ಡಬ್ಲ್ಯೂ-5 |
| ತಂದೆಯ/ಗಂಡನ ಹೆಸರು | : | ನಾರಾಯಣ | ಸಿ.ಡಬ್ಲ್ಯೂ-11 |
| ವಯಸ್ಸು | : | 43 | |
| ಉದ್ಯೋಗ | : | ಮೆಕಾನಿಕ್ | |
| ವಾಸಸ್ಥಳ | : | ಗೋಣಿಕೊಪ್ಪ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯನ್ನು ನೋಡಿರುತ್ತೇನೆ. ನಾನು ಗೋಣಿಕೊಪ್ಪದ ಪೊನ್ನಂಪೇಟೆ ರಸ್ತೆಯಲ್ಲಿ ಕಾಡ್ಲಯ್ಯಪ್ಪ ಎಂಬ ಗ್ಯಾರೆಜನ್ನು 2020 ರಿಂದ 2022 ರವೆರೆಗೆ ನಡೆಸಿರುತ್ತೇನೆ. ಈಗ ನೋಡುತ್ತಿರುವ 2 ಭಾವಚಿತ್ರದಲ್ಲಿರುವ ಗ್ಯಾರೇಜ್ ನನಗೆ ಸಂಬಂಧಿಸಿರುತ್ತದೆ. ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯು ಅಪಘಾತವಾಗಿ ಜಖಂ ಆಗಿದ್ದ ಮಹಿಂದ್ರ ಜೆತೋ ವಾಹನವನ್ನು ದಿನಾಂಕ 25.3.2022 ರ 6 ದಿನಗಳ ಹಿಂದೆ ರಿಪೇರಿ ಮಾಡಿಸಿ ತೆಗೆದುಕೊಂಡು ಹೋಗಿರುತ್ತಾರೆ. ನಂತರ ದಿನಾಂಕ 25.3.2022 ರಂದು ಹೆಚ್.ಡಿ.ಕೋಟೆ ಪೋಲಿಸರು ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯ ಜೊತೆ ನನಗೆ ಸಂಬಂಧಿಸಿದ ಗ್ಯಾರೆಜಿಗೆ ಭೇಟಿ ನೀಡಿ ಸದರಿ ವಾಹನದಿಂದ ಅಪಘಾತವಾಗಿರುತ್ತದೆ ಎಂದು ತಿಳಿಸಿದ್ದು, ನಂತರ ನನಗೆ ಸಂಬಂಧಪಟ್ಟ ಗ್ಯಾರೆಜಿನಲ್ಲಿ ಮದ್ಯಾಹ್ನದ ಸಮಯದಲ್ಲಿ ಮಹಜರನ್ನು ಮಾಡಿರುತ್ತಾರೆ. ಸಾಕ್ಷಿದಾರರು ಸದರಿ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ13 ಎಂದು, ಸಾಕ್ಷಿಯ ಸಹಿಯನ್ನು ನಿಪಿ13 ಎ ಎಂದು ಗುರುತಿಸಲಾಯಿತು. ಪೋಲಿಸರು ಸದರಿ ಸಮಯದಲ್ಲಿ ಭಾವಚಿತ್ರವನ್ನು ತೆಗೆದಿರುತ್ತಾರೆ. ಸಾಕ್ಷಿದಾರರು ಸದರಿ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ14 ಮತ್ತು ನಿಪಿ15 ಎಂದು ಗುರುತಿಸಲಾಯಿತು. 2 ನೇ ಆರೋಪಿಯು ಸದರಿ ವಾಹನವು ಮರಕ್ಕೆ ಡಿಕ್ಕಿಯಾಗಿರುತ್ತದೆ ಎಂದು ನನ್ನ ಬಳಿ ಸುಳ್ಳು ಹೇಳಿ ರಿಪೇರಿ ಮಾಡಿಸಿಕೊಂಡು ಹೋಗಿರುತ್ತಾರೆ. ಮೇಲೆ ಹೇಳಿದ ವಿಚಾರವಾಗಿ ಪೋಲಿಸರಿಗೆ ನನ್ನ ಹೇಳಿಕೆಯನ್ನು

ನೀಡಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯು ಸದರಿ ದಿನ ವಾಹನವನ್ನು ರಿಪೇರಿ ಮಾಡಿಸಿಕೊಂಡ ವ್ಯಕ್ತಿಯಾಗಿರುತ್ತಾನೆ.

**<u>ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಸ್.ಕೆ.ಎಸ್ ವಕೀಲರಿಂದಃ</u>**

ನನಗೆ ನಿಪಿ13 ರಲ್ಲಿ ಬರೆದಿರುವ ವಿಚಾರ ಗೊತ್ತಿರುವುದಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. 2 ನೇ ಆರೋಪಿಯು ನನ್ನ ಗ್ಯಾರೆಜಿಗೆ ಬಂದು ವಾಹನವನ್ನು ರಿಪೇರಿ ಮಾಡಿಸಿರುವ ಬಗ್ಗೆ ಯಾವುದೇ ಬಿಲ್ಲನ್ನು ನೀಡಿರುವುದಿಲ್ಲ. ಮಹಜರು ಮಾಡಿದ್ದಾರೆ ಎಂದು ಹೇಳುವ ಸಮಯದಲ್ಲಿ ಪೋಲಿಸರು ನನಗೆ ನೋಟಿಸನ್ನು ನೀಡಿರುವುದಿಲ್ಲ. ನಾನು ಗ್ಯಾರೆಜ್ ನಡೆಸುತ್ತಿದ್ದ ಬಗ್ಗೆ ಲೈಸೆನ್ಸನ್ನು ಪೋಲಿಸರಿಗೆ ನೀಡಿರುತ್ತೇನೆ. ಪೋಲಿಸರ ಕೋರಿಕೆಯ ಮೇರೆಗೆ ನಾನು ಸಹಿ ಮಾಡಿದ್ದು, ನಿಪಿ13 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. 2 ನೇ ಆರೋಪಿಯು ನನ್ನ ಗ್ಯಾರೆಜೆಗೆ ಬಂದು ಯಾವುದೇ ವಾಹನವನ್ನು ರಿಪೇರಿ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನದ ನೋಂದಣಿ ಸಂಖ್ಯೆಯನ್ನು ನಾನು ಹೇಳಲು ಸಾಧ್ಯವಿಲ್ಲ. ನಾನು ಸದರಿ ವಾಹನಕ್ಕೆ ಸಂಬಂಧಪಟ್ಟ ಯಾವ ಭಾಗವನ್ನು ರಿಪೇರಿ ಮಾಡಿರುತ್ತೇನೆ ಎಂದು ದೃಢೀಕರಣವನ್ನು ನೀಡಿರುವುದಿಲ್ಲ. 2 ನೇ ಆರೋಪಿಯು ನನ್ನ ಗ್ಯಾರೆಜಿಗೆ ರಿಪೇರಿಗೆಂದು ಬಂದಿರುವುದಿಲ್ಲ, ಆತನು ಮರಕ್ಕೆ ಡಿಕ್ಕಿ ಮಾಡಿರುತ್ತೇನೆ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ